**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 30/2021 ಸಿ.ಡಬ್ಲ್ಯೂ-14 ಪಿ.ಡಬ್ಲ್ಯೂ-11

| | | |
|---|---|---|
| ಹೆಸರು | ಃ | ಸುರೇಶಕುಮಾರ |
| ತಂದೆಃಗಂಡ | ಃ | ಭೀಮಸಿಂಗ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | : | ಪಿ.ಎಸ್.ಐ ಹುಮನಾಬಾದ |
| ವಾಸಸ್ಥಳ | ಃ | ಹುಮನಾಬಾದ |

ದಿನಾಂಕಃ 14.11.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ**

ನಾನು ದಿಃ 06-12-2019 ರಿಂದ ದಿಃ 15-10-2020 ರವರೆಗೆ ನಿಂಬರ್ಗಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 13-04-2020 ರಂದು ಸ. 4.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಒಂದು ಟೈಪ ಮಾಡಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದರ ಸಾರಾಂಶದ ಮೇರೆಗೆ ಗುನ್ನಾ ಸಂಖ್ಯೆ 43/2020 ರ ದಾಖಲಿಸಿಕೊಂಡು, ನಂತರ 5.00 ಗಂಟೆಗೆ ಪ್ರ,ವ.ವ.ವರದಿ ಮತ್ತು ಚಾಸಾ 1 ರವರು ಸಲ್ಲಿಸಿದ ಭಾವಚಿತ್ರಗಳನ್ನು ನಮ್ಮ ಸಿಬ್ಬಂದಿಯವರಾದ ಪಿ.ಸಿ 199 ರವರ ಕಡೆಯಿಂದ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು, ಪ್ರತಿಗಳನ್ನು ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಸಾ. 5.30 ಗಂಟೆ ಸುಮಾರಿಗೆ ಯಳಸಂಗಿ ಗ್ರಾಮಕ್ಕೆ ಭೇಟಿ ನೀಡಿ ಚಾಸಾ 1 ರವರು ತೋರಿಸಿದ ಸ್ಥಳ ಪರಿಶೀಲನೆ ಮಾಡಿ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಸ. 5.30 ರಿಂದ 6.30 ರವರೆಗೆ ಪಂಚನಾಮೆಯನ್ನು ಕೈಗೊಂಡು ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತೇವೆ. ನಂತರ ಸಾಕ್ಷಿದಾರರಾದ ಚಾಸಾ 7, 9, 10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ಅದೇ ಗ್ರಾಮದಿಂದ ಹಿಡಿದುಕೊಂಡು ಬಂದು ವಿಚಾರಿಸಿದಾಗ ಆತನ

ಮೋಬೈಲ್‌ನಲ್ಲಿ ಟಿಕಟಾಕ ವಿಡಿಯೋ ಮಾಡಿ ಪ್ರಧಾನ ಮಂತ್ರಿ ಮೋದಿ ಮತ್ತು ಒವೈಸಿ ಭಾವಚಿತ್ರದ ಮೇಲೆ ಗುರುತು ಮಾಡಿ ಥೂಕ್ ತುವ ತೇರೆ ಮು ಪರ್ ಅಂತಾ ಶಬ್ದಗಳನ್ನು ಬಳಸಿದ್ದು ಸದರಿ ಮೋಬೈಲನ್ನು ಠಾಣೆಗೆ ವಿಚಾರಣೆಯ ಕಾಲಕ್ಕೆ ಠಾಣೆಗೆ ತಂದು ಹಾಜರಪಡಿಸಿದ್ದು, ಇಬ್ಬರು ಪಂಚರಾದ ಚಾಸಾ 4 ಮತ್ತು 5 ರವರನ್ನು ಕರೆಯಿಸಿ ಅವರ ಸಮಕ್ಷಮದಲ್ಲಿ ಮೊಬೈಲ ಪರಿಶೀಲಿಸಿದ್ದು ಒಂದು ಕಪ್ಪು ಬಣ್ಣದ ರೆಡ್ಡಮಿ ಕಂಪನಿಯ ಮೊಬೈಲನ್ನು ರಾ. 8.00 ಗಂಟೆಯಿಂದ 9.00 ಗಂಟೆಯವರೆಗೆ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಮರುದಿನ ವಿಚಾರಣೆ ಹಾಜರು ಆಗಬೇಕು ಅಂತಾ ತಿಳಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ದಿಃ 14-04-2020 ರಂದು ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಮತ್ತು ಆರೋಪಿತನನ್ನು ಚಾಸಾ 1 ರವರಿಗೆ ತೋರಿಸಿ ಅವನ ಹೆಸರನ್ನು ತಿಳಿಸಿರುತ್ತೇವೆ, ನಂತರ ಚಾಸಾ 12 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿಃ 15-04-2020 ರಂದು ಆರೋಪಿತನು ಉಪಯೋಗಿಸಿದ ಟಿಕಟಾಕ ಐ,ಡಿ@ishaq_attar786 ಇದರ URL No. and IP address ಒದಗಿಸುವ ಕುರಿತು ಮಾನ್ಯ ಉಪಅಧಿಕ್ಷಕರು ಸಿ.ಐ.ಡಿ ಸೈಬರ ಪೋಲಿಸ್ ಠಾಣೆಗೆ ಪತ್ರ ಬರೆದಿರುತ್ತೇನೆ. ನಂತರ ಸದರಿಯವರು ನೀಡಿದ ಐ.ಪಿ. ವಿಳಾಸ ಮತ್ತು ಮೊಬೈಲ ನಂಬರನ ಐ. ಪಿ. ವಿಳಾಸದ ಡಿಟೈಲಸ್ ಮತ್ತು ಮೋಬೈಲ ಸಂಖ್ಯೆ ಕಸ್ಟಮರ ಅಪಲೀಕೇಶ ಫಾರಮನ್ನು ನೀಡಿದ್ದನು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಎಲ್ಲಾ ತನಿಖೆ ಪೂರ್ಣ ಗೊಂಡ ಕಾರಣ ದಿಃ 07-10-2020 ರಂದು ಆರೋಪಿತನ ವಿರುದ್ದ ದೋ.ಪ. ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಬಿ ಅಂತಾ ಗುರುತಿಸಲಾಯಿತು. ಪ್ರ.ವ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 10, ಸಾಕ್ಷಿಯ ಸಹಿಯನ್ನು ನಿಪಿ. 10 ಎ ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 4 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಬಿ ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 3 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಸಿ ಅಂತಾ

ಗುರುತಿಸಲಾಯಿತು.   ಸಾಕ್ಷಿಯು ನಿಪಿ. 5 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಸಿ ಅಂತಾ ಗುರುತಿಸಲಾಯಿತು.  ಮಾನ್ಯ ಉಪಅಧಿಕ್ಷಕರು ಸಿ.ಐ.ಡಿ ಸೈಬರ ಪೋಲಿಸ್ ಠಾಣೆಗೆ ಬರೆದ  ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 11 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ. 11 ಎ ಅಂತಾ ಗುರುತಿಸಲಾಯಿತು.  ಸದರಿ ಸಿ.ಐ.ಡಿ ಅಧಿಕಾರಿಗಳು ನೀಡಿದ ದಾಖಲೆಯನ್ನು ಒಟ್ಟಾಗಿ ನಿಪಿ. 12 , ಸಾಕ್ಷಿಯ ಸಹಿಯನ್ನು ನಿಪಿ. 12 ಎ ಅಂತಾ ಗುರುತಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿದ್ದು ಆಲಿಸಿ ನೀಡಲಾಯಿತು.</u>

ಓ.ಹೇ.ಕೇ.ಸರಿ  ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ